





ಉಂಡೆಗಳ ಚೆಂಡಾಟ, ಹಿಮ ಮಾನವನ ರಚನೆಯಲ್ಲಿ ತೊಡಗಿಕೊಂಡು ಎರಡು ಗಂಟೆ ಕಳೆದೆವು.

### ಇಂಡಿಯನ್ ಕ್ಯಾನಿಯನ್

ಇದು ಅಮೆರಿಕನ್ ಇಂಡಿಯನ್ನರ ಕಾದಿರಿಸಿದ ಪ್ರದೇಶ. ಆಂಡ್ರಿಯಾಸ್ ಕ್ಯಾನಿಯನ್ ಪಾರ್ಕಿಂಗ್ ಜಾಗದಲ್ಲಿ ಕಾರನ್ನು ಬಿಟ್ಟು, ಕಾಲುದಾರಿಯಲ್ಲಿ ಆಂಡ್ರಿಯಾಸ್ ಹಳ್ಳದ ಕಡೆ ನಡೆದು ಹೋದೆವು. ಇಲ್ಲಿ ಕ್ಯಾಲಿಫೋರ್ನಿಯ ಪಾಮ್ ವೃಕ್ಷಗಳ ಹಸಿರು ಮತ್ತು 150 ವಿವಿಧ ಜಾತಿಯ ಮರಗಳು, ಒಂದು ಕಿ.ಮೀ ಸುತ್ತಳತೆಯಲ್ಲಿ ಸುಂದರವಾದ ಓಯಸಿಸ್‌ಅನ್ನೇ ಸೃಷ್ಟಿಸಿದೆ. ಕಾಲುದಾರಿಯಲ್ಲಿ ಸಾಗುತ್ತಿದ್ದಂತೆ ಇಕ್ಕೆಲಗಳಲ್ಲಿ ಪಾಮ್ ವೃಕ್ಷಗಳು, ಚಿತ್ರ ವಿಚಿತ್ರ ಕಲ್ಲಿನ ಆಕೃತಿಗಳು, ಜುಳು ಜುಳು ಹರಿಯುವ ಆಂಡ್ರಿಯಾಸ್ ಹಳ್ಳ ಎಲ್ಲವೂ ನಯನಮನೋಹರ. ಛಾಯಾಚಿತ್ರಣ, ಹಕ್ಕಿ ವೀಕ್ಷಣೆ ಅಥವಾ ಪಿಕ್ನಿಕ್‌ಗೆ ಸೂಕ್ತ ತಾಣವಿದು.

### ಪಾಮ್ ಕ್ಯಾನಿಯನ್

ಊಟದ ಬಳಿಕ 15 ಮೈಲಿ ದೂರದಲ್ಲಿರುವ ಪಾಮ್ ಕ್ಯಾನಿಯನ್‌ಗೆ ನಮ್ಮ ಪ್ರಯಾಣ. ಪ್ರಾಕೃತಿಕ ಸೌಂದರ್ಯದಲ್ಲಿ ಪಶ್ಚಿಮ ಅಮೆರಿಕಾದಲ್ಲಿ ಇದು ಅತ್ಯಂತ ಪ್ರಮುಖ ಸ್ಥಾನ ಪಡೆದಿದೆ. ಕಹಿಲ್ಲಾ ಅಮೆರಿಕನ್ ಇಂಡಿಯನ್ ಜನಾಂಗ ಉಪಯೋಗಿಸುತ್ತಿದ್ದ ಸ್ಥಳೀಯ ಸಸ್ಯ ಹಾಗೂ ಪ್ರಾಣಿ ವರ್ಗಗಳು ಮತ್ತು ಎಲ್ಲೆಲ್ಲೂ ಕಂಡು ಬರುವ ಪಾಮ್ ವೃಕ್ಷಗಳಿಂದಾಗಿ, ಈ ಪ್ರದೇಶವು ಕಲ್ಲು ಬಂಡೆಗಳ, ಬರಡು ಮರುಭೂಮಿಯ ನಡುವೆ, ಒಂದು ಅಚ್ಚರಿಯ ಪ್ರವಾಸಿ ತಾಣವನ್ನೇ ನಿರ್ಮಿಸಿದೆ. ಮೋಡ ಕವಿದ, ಬೆಚ್ಚಗಿನ ಹವೆ ನಮ್ಮನ್ನು ಈ ಸುಂದರ ಪ್ರದೇಶದಲ್ಲಿ ಮೂರು ಮೈಲಿ ನಡೆಯಲು ಪ್ರೇರೇಪಿಸಿತು. ಅದೊಂದು ಹಿತಕರ ಅನುಭವ.

ಶೀಲ್ಡ್ ಖರ್ಜೂರ ತೋಟ

ಇಲ್ಲಿ ಮರುಭೂಮಿಯ ಹವಾಗುಣ ಇರುವುದರಿಂದ ಮಧ್ಯ ಪ್ರಾಚ್ಯದಲ್ಲಿ ಬೆಳೆಯುವ ಶ್ರೇಷ್ಠ ದರ್ಜೆಯ ಖರ್ಜೂರದ ತಳಿಗಳನ್ನು ಬೆಳೆದು, ಇಡೀ ಉತ್ತರ ಅಮೆರಿಕಕ್ಕೆ ಮಾರಾಟ ಮಾಡುತ್ತಾರೆ.

ಮೊದಲು ಅವರ ಮಾರಾಟ ಮಳಿಗೆ ಪ್ರವೇಶಿಸಿ, ವೈವಿಧ್ಯಮಯ ಖರ್ಜೂರ, ಖರ್ಜೂರದ ಕೇಕ್‌ಗಳು, ಶುಂಠಿ, ಮಾವಿನ ಕಾಯಿಯ ಜೆಲ್‌ಗಳನ್ನು ಖರೀದಿಸಿದೆವು. ಮಾರಾಟಕ್ಕಿಟ್ಟ ಯಾವ ವಸ್ತುವನ್ನಾದರೂ ಉಚಿತವಾಗಿ ಸವಿಯಬಹುದು. ಖರೀದಿ ಕಡ್ಡಾಯವಲ್ಲ. ಅಲ್ಲಿನ ಪ್ರಮುಖ ಆಕರ್ಷಣೆಯಾದ ಖರ್ಜೂರದ ಮಿಲ್ಕ್ ಶೇಕ್ ಕುಡಿದು ಆನಂದಿಸಿದೆವು. ನಾವು $50 ಮೇಲ್ಪಟ್ಟು ಕೊಂಡದ್ದರಿಂದ ಅವರ ಖರ್ಜೂರ ತೋಟಕ್ಕೆ ಹೋಗಲು ಉಚಿತ ಪಾಸ್ ಸಿಕ್ಕಿತು. ಇಲ್ಲವಾದರೆ $5 ಪ್ರವೇಶ ಶುಲ್ಕವಿದೆ.

ಒಳಗೆ ಪ್ರವೇಶಿಸಿದಂತೆಯೇ ಕಿತ್ತಳೆ, ಅಂಜೂರದ ಗಿಡಗಳ ಮಧ್ಯೆ ಖರ್ಜೂರದ ಮರಗಳು ಗೋಚರಿಸಿದವು. ಖರ್ಜೂರದ ಹೂವಿನ, ಕಾಯಿ ಮತ್ತು ಹಣ್ಣಿನ ಗೊಂಚಲು, ವಿವಿಧ ವರ್ಣಗಳಲ್ಲಿ ಕಾಣಿಸಿದವು. ಹಣ್ಣಾಗಿ ಉದುರಿ ಕೆಳಗೆ ಬಿದ್ದ ಖರ್ಜೂರ, ಅಂಜೂರ, ಕಿತ್ತಳೆ ಹಣ್ಣುಗಳನ್ನು ಹಕ್ಕಿ ತಿನ್ನುತ್ತಾ, ಅಲ್ಲಿಂದ ನಿರ್ಗಮಿಸಿದೆವು.

ಚಿತ್ರಗಳ ವಿವರ:

1 ಖರ್ಜೂರದ ತೋಟದಲ್ಲಿ ಖರ್ಜೂರದ ಮರಗಳು
2 ತಲೆ ಬುರುಡೆಯನ್ನು ಹೋಲುವ ಸ್ಕಲ್ ರಾಕ್
3 ಜೋಷುವಾ ಮರಗಳ ರಾಷ್ಟ್ರೀಯ ಉದ್ಯಾನ
4/8 ಕಾರ್ಬಜ್ಜೆನ್ ಡೈನಾಸಾರ್ ಪಾರ್ಕಿನಲ್ಲಿ ಟೈರನೋಸಾರಸ್
5 ಕೀಸ್ ವ್ಯೂ ನಿಂದ ಸೂರ್ಯಾಸ್ತದ ಸುಂದರ ದೃಶ್ಯ
6 ವಿಂಡ್ ಮಿಲ್ ಗಳ ವಿಹಂಗಮ ನೋಟ
7 ಇಂಡಿಯನ್ ಕ್ಯಾನಿಯನ್